ನ್ಯಾಯಾಲಯವೆಂದರೆ ವಾಗ್ವಾದಗಳ ವಾಗ್ವಿಲಾಸದ ವೇದಿಕೆಯಷ್ಟೇ ಅಲ್ಲ. ದೇಶದ ಮೌಲ್ಯವ್ಯವಸ್ಥೆ ಮತ್ತು ನೈತಿಕತೆಯನ್ನು ಸಂವಿಧಾನದ ತಳಹದಿಯಲ್ಲಿ ಕಾಪಿಡುವ ಬಹುದೊಡ್ಡ ಜವಾಬ್ದಾರಿ ನ್ಯಾಯಾಂಗಕ್ಕಿದೆ. ಈ ಕರ್ತವ್ಯ ನಿರ್ವಹಣೆಗೆ – ಇತಿಹಾಸ, ನಂಬಿಕೆ, ಹಿಂದಿನ ತೀರ್ಪುಗಳು ಸೇರಿದಂತೆ ವಿಸ್ತಾರವಾದ ಓದಿನ ಅವಶ್ಯಕತೆ ಇರುತ್ತದೆ. ಮಾತುಕತೆ–ಚರ್ಚೆಗೆ ಪಡಸಾಲೆಗಳು, ನ್ಯಾಯಾಧೀಶರ ಓದಿಗೆ ಅನುಕೂಲ ಕಲ್ಪಿಸುವ ಲೈಬ್ರರಿಗಳು, ಆಯುಕ್ತರ ಕಚೇರಿಗಳು ಸೇರಿದಂತೆ ಹಲವು ವಿಭಾಗಗಳು ನ್ಯಾಯಾಲಯ ಸಮುಚ್ಚಯದ ಭಾಗವಾಗಿರುತ್ತವೆ. ಸಿಬ್ಬಂದಿ ತಮ್ಮ ಕೌಟುಂಬಿಕ ಜವಾಬ್ದಾರಿಯನ್ನು ನಿರ್ವಹಿಸಲು ಅನುಕೂಲವಾಗುವಂತೆ ಶಿಶುಪಾಲನಾ ಕೇಂದ್ರವನ್ನೂ ತೆರೆಯಲಾಗಿದೆ.

ಹಳೆಯ ಕಟ್ಟಡವು ಶಿಥಿಲವಾಗಿದ್ದರಿಂದ ಹೊಸ ಕಟ್ಟಡ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಯಿತು ಎನ್ನುವುದು ಕಾರಣವಾದರೂ, ಬಹಳ ದೂರದೃಷ್ಟಿಯೊಂದಿಗೆ ನೂತನ ಕಟ್ಟಡ ನಿರ್ಮಾಣವಾಗಿದೆ. ಹೊಸ ರೂಪು ವಿನ್ಯಾಸದೊಂದಿಗೆ ಆಧುನಿಕತೆಯ ಅಗತ್ಯಗಳಿಗೆ ತಕ್ಕಂತೆ 'ನ್ಯಾಯಾಂಗ ಸೌಧ' ಪುನರ್ ನಿರ್ಮಾಣಗೊಂಡಿದೆ.

ಜಾರ್ಖಂಡ್‌ನ ಹೈಕೋರ್ಟ್ ಕಟ್ಟಡದ ಸಂದರ್ಭದಲ್ಲಿ, ಆ ರಾಜ್ಯದ ಸಾಮಾಜಿಕ ಸ್ಥಿತಿಯನ್ನು ನೆನಪಿಸಿಕೊಳ್ಳಬೇಕು. 32 ಸಾವಿರಕ್ಕೂ ಹೆಚ್ಚು ಹಳ್ಳಿಗಳಿರುವ ಜಾರ್ಖಂಡ್ ರಾಜ್ಯ ಬಹುಕಾಲ ಒಂದಲ್ಲಾ ಒಂದು ಸಮಸ್ಯೆಯಿಂದ ಬಳಲುತ್ತಲೇ ಇರುವ ರಾಜ್ಯ. ಮಾವೋವಾದಿಗಳ ಹೋರಾಟ, ಪ್ರತ್ಯೇಕ ರಾಜ್ಯದ ಅಸ್ತಿತ್ವಕ್ಕಾಗಿ ಹೋರಾಟಗಳಿಗೆ ಜಾರ್ಖಂಡ್ ಸಾಕ್ಷಿಯಾಗಿದೆ. ಸ್ವಾತಂತ್ರ್ಯ ಪೂರ್ವದಿಂದಲೂ ಹೋರಾಟಗಳಲ್ಲಿ ತೊಡಗಿಸಿಕೊಂಡು ತಮ್ಮ ಸಮುದಾಯಗಳ ಅಸ್ತಿತ್ವ ಉಳಿಸಿಕೊಳ್ಳಲು ಪ್ರಯತ್ನಿಸಿದ ಬುಡಕಟ್ಟುಗಳು ಅಲ್ಲಿವೆ. ಸಂಘರ್ಷಗಳ ಈ ನೆಲ, ಬುಡಕಟ್ಟು ಸಂಸ್ಕೃತಿ ಗಾಢವಾಗಿರುವ ರಾಜ್ಯವೂ ಹೌದು.

ವ್ಯವಸಾಯವನ್ನೇ ತನ್ನ ಉಸಿರಾಗಿಸಿಕೊಂಡು ಬಂದಿರುವ ಜಾರ್ಖಂಡ್‌ನ ಜನರು, 'ಬಿಳಿಕಾಲರ್'ನ ಜನರ ಧೋರಣೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ತುಸು ಹೆಚ್ಚು ಸಮಯವನ್ನೇ ತೆಗೆದುಕೊಳ್ಳುತ್ತಾರೆ. ಅವರ ಈ ಮುಗ್ಧತೆಯು ದುರ್ಬಳಕೆಯಾದ ಉದಾಹರಣೆಗಳೂ ಇವೆ. ಶಿಕ್ಷಣದ ಕೊರತೆ ಇರುವ ಕಾರಣಕ್ಕೇ ಇರಬೇಕು, ಜಾರ್ಖಂಡ್‌ನಲ್ಲಿ ವಾಮಾಚಾರ ನಂಬುವವರ ಸಂಖ್ಯೆ ದೊಡ್ಡದಿದೆ.

ಔಪಚಾರಿಕ ಶಿಕ್ಷಣವು ಜಾರ್ಖಂಡ್‌ನ ಹಳ್ಳಿಗಳನ್ನು ವಿಳಂಬಗತಿಯಲ್ಲಿ ತಲುಪುತ್ತಿದೆ. ಇದರ ಪರಿಣಾಮ ಎನ್ನುವಂತೆ, ದೌರ್ಜನ್ಯ–ದಬ್ಬಾಳಿಕೆಗಳ ಪ್ರಕರಣಗಳು ಅಲ್ಲಿ ಹೆಚ್ಚು. ಜಾರ್ಖಂಡ್‌ನ ಜಾಮ್‌ತಾರಾ ಎಂಬ ಊರು 'ಸೈಬರ್ ಅಪರಾಧಗಳ ಭಾರತದ ರಾಜಧಾನಿ' ಎಂಬ ಕುಖ್ಯಾತಿಗೆ ಪಾತ್ರವಾಗಿತ್ತು. ಇದೆಲ್ಲವನ್ನೂ ಗಮನಿಸಿದರೆ, ಅಪರಾಧ ಪ್ರಕರಣಗಳ ವಿಚಾರಣೆ,

## ಸುಸ್ಥಿರ ಮಾದರಿಗೆ ಒತ್ತು

ಹೈಕೋರ್ಟ್‌ನ ಹೊಸ ಕಟ್ಟಡವನ್ನು ಪರಿಸರ ಸ್ನೇಹಿ ಮಾದರಿಯಲ್ಲಿ ನಿರ್ಮಿಸಲಾಗಿದೆ. ಛಾವಣಿಯಲ್ಲಿ ಸೌರಫಲಕಗಳನ್ನು ಅಳವಡಿಸಲಾಗಿದ್ದು, ಬಿಸಿಲನ್ನು ಬಳಸಿ ಇಂಧನ ಉತ್ಪನ್ನ ಮಾಡಲಾಗುವುದು. ಎರಡು ಸಾವಿರ ಕೆ.ವಿ. ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ವ್ಯವಸ್ಥೆಯಿದ್ದು, ಕಟ್ಟಡದಲ್ಲಿ ಅಗತ್ಯವಿರುವ ಒಟ್ಟು ವಿದ್ಯುತ್ ಪ್ರಮಾಣದ ಶೇ. 40ರಷ್ಟನ್ನು ಸೌರಮೂಲದಿಂದ ಪಡೆಯಬಹುದಾಗಿದೆ. ಜೊತೆಗೆ ಸುತ್ತಮುತ್ತ ಹಸುರಿನ ತಂಪು ವಾತಾವರಣವು ಉಳಿಯಬೇಕೆಂಬ ಆಶಯದಿಂದ, ಆವರಣದಲ್ಲಿ 4,400 ಗಿಡಗಳನ್ನು ನೆಡಲಾಗಿದೆ. ನೀರಿನ ಬಳಕೆಗೂ ಹಲವು ಮೂಲಗಳನ್ನು ಹೊಂದಿಸಿಕೊಳ್ಳಲಾಗಿದೆ. ದಿನಕ್ಕೆ 353 ಕಿಲೋ ಲೀಟರ್ ನೀರಿನ ಅಗತ್ಯವಿದ್ದು, ಆರಂಭದ ದಿನಗಳಲ್ಲಿ ಪುರಸಭೆಯೇ ನೀರು ಪೂರೈಕೆ ಮಾಡಲಿದೆ. ನಂತರದಲ್ಲಿ ಕುಡಿಯುವ ನೀರು ಮತ್ತು ಇತರ ಬಳಕೆಯ ನೀರನ್ನು ಪ್ರತ್ಯೇಕವಾಗಿ ಪೂರೈಸಲಾಗುವುದು. ಶೌಚಾಲಯದಲ್ಲಿ ಫ್ಲಶ್ ಮಾಡಲು ಮತ್ತು ಗಿಡಗಳಿಗೆ ಒದಗಿಸಲು ಸಂಸ್ಕರಿತ ನೀರನ್ನೇ ಬಳಸಲಾಗುವುದು. ದಿನಕ್ಕೆ 200 ಕಿಲೋ ಲೀಟರ್ ನೀರನ್ನು ಶುದ್ಧೀಕರಿಸುವ ಎಸ್‌ಟಿಪಿ ಅಳವಡಿಸಲಾಗಿದೆ.

ಹೊಸ ಕಟ್ಟಡದ ಪರಿಕಲ್ಪನೆ ರೂಪು ಪಡೆದುದು 2013ರಲ್ಲಾದರೂ, ಅದರ ಕೆಲಸ ಶುರುವಾಗಿದ್ದು 2015ರಲ್ಲಿ. ಸುಂದರವಾದ ಆಡಿಟೋರಿಯಂ, ಸಭಾ ಕಲಾಪಕ್ಕೆ ಬೇಕಾಗುವ ಕೊಠಡಿಗಳು, ಸಮಿತಿಗಳ ಸಭೆ ನಡೆಸಲು ಸಭಾಂಗಣಗಳು, ಅಡ್ವೊಕೇಟ್ ಜನರಲ್ ಮತ್ತು ಸರ್ಕಾರಿ ಸಲಹಾಗಾರರಿಗೆ ಪ್ರತ್ಯೇಕ ಕಟ್ಟಡ; ನ್ಯಾಯಾಧೀಶರು, ವಕೀಲರು, ಸಂದರ್ಶಕರು ಸೇರಿದಂತೆ ಒಟ್ಟು 4,300 ಜನರು ಬಳಕೆ ಮಾಡಲು ಅನುಕೂಲವಾಗುವಂತೆ ಈ ನ್ಯಾಯಾಲಯ ಸಂಕೀರ್ಣವನ್ನು ನಿರ್ಮಿಸಲಾಗಿದೆ.



ಜಾರ್ಖಂಡ್ ಹೈಕೋರ್ಟ್‌ನಲ್ಲಿರುವ ಬಾಬಾ ಸಾಹೇಬ್ ಅಂಬೇಡ್ಕರ್ ಗ್ಯಾಲರಿ